## ಪೋಷಕರ ಹೇಳಿಕೆ/ಪ್ರಶಂಸೆ

ಆತ್ಮೀಯ ಸಿಎಂಸಿಎ,
ಮಕ್ಕಳು ಮೊನಚಾಗಲು ಮಾತುಗಳು ಬೇಕಿಲ್ಲ, ಒಳ್ಳೆಯ ಮನಸುಳ್ಳವರು ಇದ್ದರೆ ಸಾಕು ಎನ್ನುವಂತೆ ಸಿಎಂಸಿಎ ಮಾರ್ಗದರ್ಶನದಲ್ಲಿ ಕಟ್ಟಿಕೊಟ್ಟ ನೈತಿಕ ಮೌಲ್ಯಗಳು ಮಕ್ಕಳ ಮನಸ್ಸಿನ ಆಳದಲ್ಲಿ ಉಳಿದು ಪ್ರೇರೇಪಿತರಾಗುವಂತೆ ತನ್ನಿಂದ ತಾನು ನಮ್ಮ ಮಗಳು ಚಟುವಟಿಕೆಗಳಿಂದ ಬದಲಾವಣೆ ಹೊಂದುತ್ತಿರುವುದು ನಮ್ಮ ಕಣ್ಣೆದುರಿಗೆ ಕಂಡು ಬಂದಂತಿದೆ. ಇಂತಹ ವಿಚಾರವನ್ನು ಅರ್ಥೈಸಿಕೊಂಡು ಮಕ್ಕಳು ಬಿಡುವಿನ ಸಮಯದಲ್ಲಿ ಗ್ರಂಥಾಲಯಕ್ಕೆ ಭೇಟಿ ಕೊಡುವುದರಿಂದ ತನಗಾಗುವ ಒಳಿತು ನಮ್ಮ ಸಮಾಜಕ್ಕೂ ತಲುಪುತ್ತದೆ. ಆದ್ದರಿಂದ ಇಂತಹ ನಡೆಯನ್ನ ಹೊಂದಿರುವ ನಿಮ್ಮ ಸಂಸ್ಥೆ ಸುದೀರ್ಘವಾಗಿ ಮಕ್ಕಳಿಗೆ ಹಲವಾರು ವಿಷಯಗಳೊಂದಿಗೆ ಮುಂದಿನ ವರ್ಷವೂ ಹೊರಹೊಮ್ಮುತಿರಲಿ ಎಂದು ಆಶಿಸುತ್ತೇನೆ.

ಇಂತಿ
ಕೃಷ್ಣ ಹೆಚ್ ಬಿ
(ಗಗನ ಕೆ ತಂದೆ) ಹರೂರು, ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ

## ಮಗುವಿನ ಹೇಳಿಕೆ/ಪ್ರಶಂಸೆ

ನಾನು ಪ್ರತಿ ವಾರ ತಪ್ಪದೇ ಗ್ರಂಥಾಲಯಕ್ಕೆ ಬರುತ್ತೇನೆ. ನನಗೆ ಇಷ್ಟವಾದ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಂಡು ಮಾಡುತ್ತೇನೆ. ಭಾರತದ ಹಬ್ಬಗಳು, ಅಂಚೆ ಮಹಿಳೆ, ನಾಣ್ಯಗಳು, ಕತೆ ಬರೆಯುವುದು, ವಿನ್ಯಾಸ ರಚಿಸುವುದು, ಸ್ಮಾರಕಗಳು, ಗಾದೆಗಳು, ಸಂಜ್ಞೆಗಳು, ಪೋಸ್ಟರ್ ತಯಾರಿಸುವುದು ಇತ್ಯಾದಿ ಚಟುವಟಿಕೆಗಳನ್ನು ಬಹಳ ಇಷ್ಟಪಟ್ಟು ಮಾಡಿದ್ದೇನೆ.

ಗ್ರಂಥಾಲಯಕ್ಕೆ ಬರುವುದು ನನಗೆ ತುಂಬಾ ಖುಷಿಯ ಸಂಗತಿ ಹಾಗೂ ನನ್ನ ಶಿಕ್ಷಕರು ಮತ್ತು ಪೋಷಕರು ಚಟುವಟಿಕೆಗಳನ್ನು ನೋಡಿ ಖುಷಿ ಪಟ್ಟರು. ಹೇಗೆ ನಾಯಕತ್ವ ರೂಢಿಸಿಕೊಳ್ಳಬಹುದು ಎಂಬುದು ನನಗೆ ಮನವರಿಕೆಯಾಗುತ್ತಿದೆ. ನನ್ನ ಪ್ರಗತಿ ಕಂಡು ಪೋಷಕರು ಗ್ರಂಥಾಲಯಕ್ಕೆ ಕಳುಹಿಸಿಕೊಡುತ್ತಿರುವುದು ನನಗೆ ಸಂತೋಷ ತಂದಿದೆ.

ಯಶಸ್ವಿನಿ ಎ ಆರ್
7ನೇ ತರಗತಿ
GHPS, ಅಂಜನಾಪುರ
ರಾಮನಗರ ತಾಲ್ಲೂಕು



## ಆತ್ಮೀಯ ಪೋಷಕರೇ, ಈ ಕಾರ್ಯಕ್ರಮವು ನಿಮ್ಮ ಮಗುವಿನಲ್ಲಿ ಉತ್ತಮ ಪರಿವರ್ತನೆಯನ್ನು ತರಲು ಸಹಾಯಮಾಡುತ್ತದೆ!

1. ಸಮಸ್ಯೆಗಳನ್ನು ಪರಿಹರಿಸುವಲ್ಲಿ ಉತ್ತಮರಾಗಲು
2. ಅವರು ಉತ್ತಮವಾಗಿ ಆಲೋಚಿಸಲು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳಲು
3. ಉತ್ತಮವಾಗಿ ಸಂವಹನವನ್ನು ನಡೆಸಲು
4. ಸೃಜನಶೀಲರಾಗಿರಲು
5. ಬೇರೆಯವರೊಂದಿಗೆ ಗಟ್ಟಿಯಾದ ಸಂಬಂಧಗಳನ್ನು ಬೆಳೆಸಿಕೊಳ್ಳಲು
6. ತಮ್ಮನ್ನು ತಾವು ಹೆಚ್ಚಾಗಿ ಅರ್ಥಮಾಡಿಕೊಳ್ಳಲು
7. ಬೇರೆಯವರ ಬಗ್ಗೆ ಕಾಳಜಿ / ಅನುಭೂತಿ ತೋರಿಸುವಲ್ಲಿ ಮತ್ತು ಅರ್ಥಮಾಡಿಕೊಳ್ಳುವಲ್ಲಿ
8. ಸಮಸ್ಯೆಗಳನ್ನು ಸಕಾರಾತ್ಮಕ ಮನೋಭಾವನೆಯಿಂದ ಎದುರಿಸುವಲ್ಲಿ
9. ಒಬ್ಬ ಕಾಳಜಿಯುಳ್ಳ, ಚಿಂತನಾಶೀಲ ಮತ್ತು ಸಕ್ರಿಯ ನಾಗರಿಕನಾಗಲು ಮತ್ತು ಮೌಲ್ಯಾಧಾರಿತ ಬದುಕನ್ನು ರೂಪಿಸಿಕೊಳ್ಳುವಲ್ಲಿ ಹಾಗೂ ಸಮುದಾಯಕ್ಕೆ ಮತ್ತು ಇತರರ ಬದುಕಿನಲ್ಲಿ ಸಹ ಮೌಲ್ಯಾಧಾರಿತ ಕೊಡುಗೆ ನೀಡುವಲ್ಲಿ

---

**ನೋಂದಾಯಿಸಿಕೊಳ್ಳುವುದು ಬಹಳ ಸುಲಭ!**
ನಿಮ್ಮ ಪೋಷಕರೊಂದಿಗೆ ಗ್ರಾಮಪಂಚಾಯತಿ ಗ್ರಂಥಾಲಯಕ್ಕೆ ಬನ್ನಿ.
ನಿಮಗೆ ಸಹಾಯ ಮಾಡಲು ಸಿಎಂಸಿಎ ಮೆಂಟರ್ ಸದಾ ಸಿದ್ಧರಿರುತ್ತಾರೆ. ಸಿಎಂಸಿಎ ಗೆ ನೀವು 99006 76515 ಅಥವಾ 76193 27182 ಕರೆ ಮಾಡಬಹುದು

**www.cmcaindia.org**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಹಯೋಗ : ಜಿಲ್ಲಾ ಪಂಚಾಯತ್, ರಾಮನಗರ

# ನನ್ನ ಒಳಿತಿಗಾಗಿ ಗ್ರಂಥಾಲಯ

# MY LIBRARY FOR A BETTER ME













ನೀವು ಕುತೂಹಲದಿಂದ ಕೂಡಿರುವ ಮತ್ತು ಪುಸ್ತಕಗಳನ್ನು ಓದಲು ಹಾಗೂ ವಿನೋದಕರ ಚಟುವಟಿಕೆಗಳನ್ನು ನಿಮ್ಮ ಸ್ನೇಹಿತರೊಂದಿಗೆ ಕೂಡಿ ಒಟ್ಟಾಗಿ ಮಾಡಲು ಬಯಸುವ 12 - 16 ವರ್ಷ ವಯಸ್ಸಿನವರೇ? ನೀವು ಹೊಸ ಕೌಶಲ್ಯಗಳನ್ನು ಕಲಿಯಲು ಮತ್ತು ನಿಮ್ಮ ಗ್ರಾಮದಲ್ಲಿ ಬದಲಾವಣೆಯನ್ನು ತರಲು ಬಯಸುವಿರೇ? ಹಾಗಿದ್ದಲ್ಲಿ, ಸಿಎಂಸಿಎ ಯ 'ನನ್ನ ಒಳಿತಿಗಾಗಿ ಗ್ರಂಥಾಲಯ' ಕಾರ್ಯಕ್ರಮಕ್ಕೆ ಸೇರಿ!

ರಾಮನಗರದಲ್ಲಿ ಈಗಾಗಲೇ 3500 ಕ್ಕೂ ಹೆಚ್ಚು ಮಕ್ಕಳು ಈ ಕಾರ್ಯಕರ್ಮದ ಸದಸ್ಯರಾಗಿದ್ದಾರೆ ಮತ್ತು ಅವರು ತಮ್ಮ ಸ್ನೇಹಿತರೊಂದಿಗೆ ಚಟುವಟಿಕೆಗಳನ್ನು ಮಾಡುತ್ತಾ, ಕಲಿಯುತ್ತಾ ಕಿರಿಯ ನಾಗರಿಕರಾಗಿ ಬದಲಾವಣೆಯನ್ನು ತರುತ್ತಿದ್ದಾರೆ. ನೀವೂ ಕೂಡ ಹಾಗೆ ಮಾಡಬಹುದು!

ಪ್ರಕೃತಿ ಪ್ರೇಮಿಯಾಗುವುದರಿಂದ ಹಿಡಿದು ಜೀವನ ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳುವುದು, ಹಣಕಾಸಿನ ನಿರ್ವಹಣೆ ಅರ್ಥ ಮಾಡಿಕೊಳ್ಳುವುದು, ಕಲೆ ಮತ್ತು ಸಾಹಿತ್ಯವನ್ನು ಆನಂದಿಸುವುದು – ಹೀಗೆ ಪ್ರತಿಯೊಬ್ಬರಿಗೂ ಏನಾದರೂ ಒಂದು ಇರುತ್ತದೆ!

ನನ್ನ ಒಳಿತಿಗಾಗಿ ಗ್ರಂಥಾಲಯ ಕಾರ್ಯಕ್ರಮವು ಪೌರ ಪ್ರಜ್ಞೆಗಾಗಿ ಮಕ್ಕಳ ಚಳುವಳಿ (ಸಿಎಂಸಿಎ) ಸಹಯೋಗದೊಂದಿಗೆ ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ (RDPR) ಓದುವ ಬೆಳಕು ಯೋಜನೆಯ ಭಾಗವಾಗಿ ನಡೆಸುತ್ತಿರುವ ಕಾರ್ಯಕ್ರಮವಾಗಿರುತ್ತದೆ.

ಒಂದು ಬಾರಿ ನೀವು ನನ್ನ ಒಳಿತಿಗಾಗಿ ಗ್ರಂಥಾಲಯ ಕಾರ್ಯಕ್ರಮದಲ್ಲಿ ನೋಂದಾಯಿಸಿಕೊಂಡರೆ, ನಿಮ್ಮ ವಾರದ ಗ್ರಂಥಾಲಯದ ಭೇಟಿಯ ಸಮಯದಲ್ಲಿ, ಸಿಎಂಸಿಎ ಕಾರ್ನರ್ ನಲ್ಲಿ ಅನೇಕ ಆಕರ್ಷಕ ಚಟುವಟಿಕೆಗಳ ಜಗತ್ತೇ ನಿಮಗಾಗಿ ಕಾಯುತ್ತಿರುತ್ತವೆ.

ನೀವು ಏನಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದರೆ ಚಿಂತಿಸಬೇಡಿ; ಗ್ರಂಥಪಾಲಕರು ಅಥವಾ ನಿಮ್ಮ ಸಿಎಂಸಿಎ ಮೆಂಟರ್ ಸದಾ ನಿಮ್ಮ ಸಹಾಯಕ್ಕಾಗಿ ಸಿದ್ಧರಿರುತ್ತಾರೆ.

ನಿಮ್ಮ ಗ್ರಂಥಾಲಯವು ಕೇವಲ ಓದುವ ಸ್ಥಳವಲ್ಲ; ಅಲ್ಲಿ ನೀವು ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬಹುದು ಹಾಗೂ ಅತ್ಯುತ್ತಮ ಅಂಶವೆಂದರೆ ನೀವು ನಿಮ್ಮದೇ ವಯಸ್ಸಿನ ಮಕ್ಕಳೊಂದಿಗೆ ಚಟುವಟಿಕೆಗಳನ್ನು ಮಾಡಬಹುದು, ಜೊತೆಯಲ್ಲಿ ಕಲಿಯಬಹುದು. ನಿಮ್ಮ ಸ್ನೇಹಿತರೊಂದಿಗೆ ಗ್ರಾಮ ಪಂಚಾಯತಿ ಗ್ರಂಥಾಲಯಕ್ಕೆ ಭೇಟಿ ನೀಡಿ ಮತ್ತು ನನ್ನ ಒಳಿತಿಗಾಗಿ ಗ್ರಂಥಾಲಯ ಕಾರ್ಯಕ್ರಮಕ್ಕೆ ನೋಂದಾಯಿಸಿಕೊಳ್ಳಿ!

ನಿಮಗಾಗಿ ಚಟುವಟಿಕೆಯೊಂದರ ತುಣುಕು ಇಲ್ಲಿದೆ! ಇಂತಹುದೆ ಹಲವಾರು ಚಟುವಟಿಕೆಗಳನ್ನು ನೀವು ಗ್ರಂಥಾಲಯಕ್ಕೆ ಭೇಟಿ ನೀಡಿದಾಗ ಮಾಡಬಹುದು ಮತ್ತು ಇನ್ನೂ ಹೆಚ್ಚು ಕಲಿಯಬಹುದು. ಇನ್ನೇಕೆ ತಡ! ಗ್ರಂಥಾಲಯಕ್ಕೆ ಭೇಟಿ ನೀಡಿ ಇಂದೇ ನೋಂದಾಯಿಸಿಕೊಳ್ಳಿ

ಮುಂದಿನ ದಿನಗಳಲ್ಲಿ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ

ಸ್ಥಳ - ನಿಮ್ಮ ಗ್ರಾಮ ಪಂಚಾಯತಿ ಗ್ರಂಥಾಲಯ

# ಚಟುವಟಿಕೆಯ ಹೆಸರು

**ದೇಸಿ - ವಿದೇಶಿ**

ಎಷ್ಟು ಹೊತ್ತು : 30 ನಿಮಿಷಗಳು
ಉದ್ದೇಶ : ವೈವಿಧ್ಯತೆಯನ್ನು ಸಂಭ್ರಮಿಸುತ್ತೇನೆ

## ಹಂತ 1:
## ನಾವೀಗ ಶುರು ಮಾಡೋಣ

1. ನೀವು ಈ ಚಟುವಟಿಕೆಯನ್ನು ನಿಮ್ಮ ಸ್ನೇಹಿತರು ಅಥವಾ ಒಡಹುಟ್ಟಿದವರ ಜೊತೆ ಮಾಡಬಹುದು.

2. ನಮಗೆ ಸಾಮಾನ್ಯವಾಗಿ ತಿಳಿದಿರುವ ಕೆಲವು ಪದಾರ್ಥಗಳ ಪಟ್ಟಿಯನ್ನು ಕೆಳಗೆ ನೀಡಲಾಗಿದೆ. ನಿಮಗೆ ಇದು ಭಾರತ ದೇಶದ್ದು ಎಂದೆನಿಸಿದರೆ, ದೇಸಿ ಎಂದು ಅದರ ಮುಂದೆ ಬರೆಯಿರಿ. ನಿಮಗೆ ಆ ಪದಾರ್ಥ ಬೇರೆ ದೇಶದಿಂದ ನಮಗೆ ಬಂದದ್ದು ಎಂದೆನಿಸಿದರೆ ವಿದೇಶಿ ಎಂದು ಬರೆಯಿರಿ.

3. ಕೆಳಗೆ ನೀಡಿರುವ ಉದಾಹರಣೆಯನ್ನು ಪ್ರಯತ್ನಿಸಿ ನೋಡಿ, ನಿಮಗೆ ತಿಳಿದ ಉತ್ತರವನ್ನು ಬರೆಯಿರಿ, ಉತ್ತರವನ್ನು ನೋಡಿ ಬರೆಯಬೇಡಿ.

4. ಸಮೋಸ! ದೇಸಿ ಅಥವಾ ವಿದೇಶಿ < *ಸರಿಯಾದ ಉತ್ತರವನ್ನು ಇಲ್ಲಿಯೇ ಗುರುತು ಹಾಕಬಹುದು* >

5. ವಾಸ್ತವವಾಗಿ ಸಮೋಸ ವಿದೇಶಿ! ನಾವೆಲ್ಲರೂ ಸಮೋಸ ತಿನ್ನುತ್ತೇವೆ, ಆದರೆ ಮೊದಲು ಸಮೋಸ ಮಾಡಿದವರು ಭಾರತೀಯರಲ್ಲ. ಅವರು ಇರಾನ್ ದೇಶಕ್ಕೆ ಸೇರಿದವರು.



## ಹಂತ 2:
## ಇದರ ಬಗ್ಗೆ ಆಲೋಚಿಸಿ – ಚಿಂತಿಸಿ

1. ಆಟವನ್ನು ಮುಂದುವರೆಸಿ, ಯಾವುದಾದರು ಪದಾರ್ಥ ಭಾರತ ದೇಶದ್ದು ಅನಿಸಿದರೆ ದೇಸಿ ಎಂದು ಅಥವಾ ಅದು ಬೇರೆ ದೇಶದಿಂದ ಬಂದಿದ್ದು ಅನಿಸಿದರೆ ವಿದೇಶಿ ಎಂದು ಬರೆಯಿರಿ.

2. ಈ ಕೆಳಗಿನ ಪದಾರ್ಥಗಳು ದೇಸಿ ಅಥವಾ ವಿದೇಶಿಯೋ ಗುರುತಿಸಿ ಬರೆಯಿರಿ

ಮಾವು ____________________
ಟೀ ____________________
ಟೊಮೇಟೊ ____________________
ಸಕ್ಕರೆ ____________________
ಆಲೂಗಡ್ಡೆ ____________________
ಚಾಕೊಲೇಟ್ ____________________
ಕಾಗದ ____________________
ಬೆಂಡೆಕಾಯಿ ____________________

ನಿಮ್ಮ ಉಲ್ಲೇಖಕ್ಕಾಗಿ ಉತ್ತರಗಳನ್ನು ಕೆಳಗೆ ನೀಡಲಾಗಿದೆ

| | |
|---|---|
| 1. ಮಾವು - ದೇಸಿ (ಭಾರತ) | 5. ಆಲೂಗಡ್ಡೆ - ವಿದೇಶಿ (ಪೆರು) |
| 2. ಟೀ - ವಿದೇಶಿ (ಚೀನಾ) | 6. ಚಾಕೊಲೇಟ್ - ವಿದೇಶಿ (ಮೆಕ್ಸಿಕೊ) |
| 3. ಟೊಮೊಟೊ - ವಿದೇಶಿ (ಮೆಕ್ಸಿಕೊ) | 7. ಕಾಗದ - ವಿದೇಶಿ (ಚೀನಾ) |
| 4. ಸಕ್ಕರೆ - ದೇಸಿ (ಭಾರತ) | 8. ಬೆಂಡೆಕಾಯಿ - ದೇಸಿ (ಭಾರತ) |